# ಕರ್ತನ ಭೋಜನದ ಗಂಭೀರತೆ

*"ಹೀಗಿರುವದರಿಂದ ಯಾವನಾದರೂ ಅಯೋಗ್ಯವಾಗಿ ಕರ್ತನ ರೊಟ್ಟಿಯನ್ನು ತಿಂದರೆ ಇಲ್ಲವೆ ಆತನ ಪಾತ್ರೆಯಲ್ಲಿ ಪಾನಮಾಡಿದರೆ ಅವನು ಕರ್ತನ ದೇಹಕ್ಕೂ ರಕ್ತಕ್ಕೂ ದ್ರೋಹ ಮಾಡಿದವನಾಗಿರುವನು. ಪ್ರತಿಮನುಷ್ಯನು ತನ್ನನ್ನು ಪರೀಕ್ಷಿಸಿ ಕೊಂಡವನಾಗಿ ಆ ರೊಟ್ಟಿಯಲ್ಲಿ ತಕ್ಕೊಂಡು ತಿನ್ನಲಿ, ಆ ಪಾತ್ರೆಯಲ್ಲಿ ಕುಡಿಯಲಿ. ಯಾಕಂದರೆ ಕರ್ತನ ದೇಹವೆಂದು ವಿವೇಚಿಸದೆ ತಿಂದು ಕುಡಿಯುವವನು ಹಾಗೆ ತಿಂದು ಕುಡಿಯುವದರಿಂದ ನ್ಯಾಯತೀರ್ಪಿಗೊಳಗಾಗುವನು. ಈ ಕಾರಣದಿಂದಲೇ ನಿಮ್ಮಲ್ಲಿ ಬಹುಮಂದಿ ಬಲಹೀನರೂ ರೋಗಿಗಳೂ ಆಗಿದ್ದಾರೆ, ಮತ್ತು ಅನೇಕರು ಸಾಯುತ್ತಾರೆ ನಮ್ಮನ್ನು ನಾವೇ ವಿಚಾರಿಸಿಕೊಂಡರೆ ನ್ಯಾಯವಿಚಾರಣೆಗೊಳಗಾಗುವದಿಲ್ಲ. ಆದರೆ ನಾವು ಕರ್ತನ ನ್ಯಾಯವಿಚಾರಣೆ ಒಳಗಾಗಿರಲಾಗಿ ಆತನು - ಇವರಿಗೆ ಲೋಕದವರ ಸಂಗಡ ಅಪರಾಧಿಗಳೆಂಬ ನಿರ್ಣಯವಾಗಬಾರದೆಂದು ನಮ್ಮನ್ನು ಶಿಕ್ಷಿಸುತ್ತಾನೆ. ಆದಕಾರಣ ನನ್ನ ಸಹೋದರರೇ,ಈ ಭೋಜನವನ್ನು ಮಾಡುವದಕ್ಕೆ ಕೂಡಿಬರುವಾಗ ಒಬ್ಬರನ್ನೊಬ್ಬರು ಕಾದುಕೊಳ್ಳಿರಿ" (1 ಕೊರಿಂಥ 11:27-33).*

ಪ್ರತಿ ಅವಕಾಶದಲ್ಲಿ ಒಂದು ಜವಾಬ್ದಾರಿ ಇರುತ್ತದೆ. ಯೇಸು ಸ್ಥಾಪಿಸಿದ ಕರ್ತನ ಭೋಜನವು ಅತಿ ಗೌರವಯುತ ಕಾರ್ಯವಾಗಿದೆ. ಹಾಗೂ ಅದನ್ನು ಗಂಭೀರವಾಗಿ ಪರಿಗಣಿಸದೆ ಹೋದರೆ, ಕಠಿಣವಾದ ತೀರ್ಪಿಗೆ ಒಳಗಾಗುತ್ತೇವೆ.

ಕೊರಿಂಥದವರು ವಾರದ ಮೊದಲನೆಯ ದಿನದಲ್ಲಿ ಹಾಗೂ ಪ್ರತಿವಾರವು ಕರ್ತನ ಭೋಜನಕ್ಕಾಗಿ ಸೇರಿಬರುತ್ತಿದ್ದರು, ಹಾಗೂ ಸೌಹಾರ್ಧತೆಯಲ್ಲಿ ಅನ್ಯೋನ್ಯತೆಯಲ್ಲಿ ಸೇರಿ ಬರುತ್ತಿದ್ದರು. ಅದಾಗ್ಯೂ ಅವರು ಯೋಚಿಸಲಾರದ ಒಂದು ಸಂಗತಿಯನ್ನು ಮಾಡಿದ್ದರು. ಅವರು ಅದರಲ್ಲಿನ ಧೈವೀಕ ಅಂಶವನ್ನು ಹಾಗೂ ಅದರ ರೂಪವನ್ನು ಮರೆತುಬಿಟ್ಟಿದ್ದರು. ಪೌಲನು ಅವರಿಗೆ ಪತ್ರವನ್ನು ಬರೆದು, ಕರ್ತನ ಭೋಜನದ ನಿಯಮವನ್ನು ಅವರು ಮೀರಿದ್ದರಿಂದ ಅವರನ್ನು ಎಚ್ಚರಿಸಿದನು. ಅವರು ಕರ್ತನ ದೇಹಕ್ಕೂ ಹಾಗೂ ರಕ್ತಕ್ಕೂ ದ್ರೋಹ ಮಾಡಿದ್ದರು ಎಂದು ತಿಳಿಸಿದನು.

ಈ ದಿನಗಳಲ್ಲಿ ನಾವುಗಳು ಕರ್ತನ ಭೋಜನವನ್ನು ಅಲಕ್ಷಮಾಡಿ, ಅದನ್ನು ನಿಯಮ ಬಾಹಿರವಾಗಿ ಆಚರಿಸಬಹುದೇ? ಪ್ರತಿ ಕ್ರೈಸ್ತನಿಗೂ ಇದು ಪ್ರಮುಖ ಪ್ರಶ್ನೆಯಾಗಿದೆ.

## ಈ ಅನಾಹುತದಲ್ಲಿರುವ ಸತ್ಯಾಂಶ

1 ಕೊರಿಂಥ ಪತ್ರಿಕೆಯಲ್ಲಿನ ವಾಕ್ಯಭಾಗದ ಬೆಳಕಿನಲ್ಲಿ ಈ ಪ್ರಶ್ನೆಗೆ ಉತ್ತರವನ್ನು ಕಂಡುಕೊಳ್ಳಬಹುದು. ಮೇಜಿನ ಬಳಿ ಸೇರಿ ಬರುವವರಿಗೆ "ಹೀಗಿರುವದರಿಂದ ಯಾವನಾದರೂ" ಎಂಬ ಸತ್ಯಾಂಶವನ್ನು ಪೌಲನು ತಿಳಿಸಿರುವನು. ಅದರಲ್ಲಿ ಪಾಲುಗಾರರಾ ಗುವವರು ಯೇಸುವಿನ ಮರಣವನ್ನು ಗ್ರಹಿಸುವ ಹೊಣೆ ಹೊಂದಿರುತ್ತಾರೆ. "ಯಾವನಾದರೂ ಆರೋಗ್ಯವಾಗಿ ಕರ್ತನ ರೊಟ್ಟಿಯನ್ನು ತಿಂದರೆ ಇಲ್ಲವೆ ಆತನ ಪಾತ್ರೆಯಲ್ಲಿ ಪಾನ ಮಾಡಿದರೆ ಕರ್ತನ ದೇಹಕ್ಕೂ ರಕ್ತಕ್ಕೂ ದ್ರೋಹ ಮಾಡಿದವನಾಗಿರುವನು" (1 ಕೊರಿಂಥ 11:27). "ಅಯೋಗ್ಯ" ಎಂದರೆ ಕರ್ತನ ಮರಣವನ್ನು ಹಗುರವಾಗಿ ಪರಿಗಣಿಸಿ ಅಥವಾ ಆತನ ದೇಹ ಹಾಗೂ ಆತನ ರಕ್ತವನ್ನು ಅಲಕ್ಷ್ಯ ಮಾಡಿ ದುರುಪಯೋಗ ಮಾಡುವದೇ ಆಗಿದೆ. ಆದ್ದರಿಂದ, "ಯಾವನಾದರೂ ಕರ್ತನ ದೇಹವೆಂದ ವಿವೇಚಿಸದೆ ತಿಂದು ಕುಡಿಯುವದರಿಂದ

ನ್ಯಾಯ ತೀರ್ಪಿಗೆ ಒಳಗಾಗುವನು" ಎಂದು ಪೌಲನು ಬರೆದನು (1 ಕೊರಿಂಥ 11:29). ಸ್ನಾನಿಕನಾದ ಯೋಹಾನನು ಪ್ರಸಂಗಿಸಿದಾಗ, ಜನರು ಅವನನ್ನು ನಿರಾಕರಿಸಿದ್ದರಿಂದ, ಆ ಸಂದೇಶದಂತೆಯೇ ಅವರಿಗೆ ತೀರ್ಪು ಉಂಟಾಯಿತು. ಸೂರ್ಯನು ಬೆಣ್ಣೆಯನ್ನು ಕರಗಿಸಿದರೂ, ಕೆಸರನ್ನು ಗಟ್ಟಿ ಮಾಡುವಂತೆ, ಯೇಸುವಿನ ಸೇವೆಯಿಂದ ಭೂಲೋಕ ದೇವರಲ್ಲಿ ಕೆಲವರಿಗೆ ರಕ್ಷಣೆ ಉಂಟಾದರೆ, ಕೆಲವರಿಗೆ ಅದರಿಂದಲೇತೀರ್ಪು ಉಂಟಾಯಿತು. ಕರ್ತನ ಭೋಜನದಲ್ಲಿ ನಿಯಮ ಪ್ರಕಾರ ಪಾಲದಾರರಾದರೇ, ನಾವು ಆತನ ಚಿತ್ತದೊಂದಿಗೆ ಜೀವಿಸುತ್ತಿದ್ದೇವೆ ಎಂಬ ನಿರೀಕ್ಷೆ ಉಂಟಾಗುತ್ತದೆ. ನಿಯಮ ಬಾಹಿರ ಪಾಲುದಾರರಾದರೇ, ಅವರು ಶಾಪಕ್ಕೆ ಒಳಗಾಗುವರು. ಹಾಗೂ ಅವರು ಅವಿಧೇಯರು ಎಂಬ ಸೂಚನೆಯೂ ಆಗಿರುತ್ತದೆ.

ಈ ಹಿನ್ನಲೆಯಲ್ಲಿ ಕೊರಿಂಥದವರು ತಾವು ತಮ್ಮ ಸ್ವಂತ ಭೋಜನವನ್ನು ತಂದು, ಅನ್ಯೋನ್ಯತೆಯಲ್ಲಿ ಊಟಮಾಡುತ್ತಿದ್ದರಿಂದ ಈ ವಿಚಾರವು ಕರ್ತನ ಭೋಜನಕ್ಕೆ ಕೀಳರಿಮೆ ಉಂಟುಮಾಡಿತು. ಅವರು ಕರ್ತನ ಮರಣದ ನೆನಪಿಗಾಗಿ ಊಟ ಮಾಡುವದಕ್ಕಿಂತಲೂ, ತಮ್ಮ ಸ್ವಂತ ಭೋಜನದಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದರು. ಕೊರಿಂಥದವರು ಮಾಡಿದ ಹಾಗೆ, ನಾವುಗಳು ಮಾಡದೆ ಇರೋಣ.

## ಈ ಅನಾಹುತಕ್ಕೆ ಉಂಟಾಗುವ ತೀರ್ಪು

ಈ ಅಧ್ಯಾಯದಲ್ಲಿ ಕರ್ತನ ಭೋಜನದ ಮಹತ್ವವನ್ನು ಗಮನಿಸುತ್ತೇವೆ. ಪೌಲನು ಇದರ ಕುರಿತು, "ಪ್ರತಿ ಮನುಷ್ಯನು ತನ್ನನ್ನು ಪರೀಕ್ಷಿಸಿಕೊಂಡವನಾಗಿ ರೊಟ್ಟಿ ಮತ್ತು ದ್ರಾಕ್ಷರಸವನ್ನು ತೆಗೆದುಕೊಳ್ಳಲಿ" ಅಂದನು (1 ಕೊರಿಂಥ 11:28). ನಾವು ಅದನ್ನು ಭುಜಿಸುವದಕ್ಕಿಂತ ಮೊದಲು, ಭುಜಿಸುವಾಗಲೂ ನಮ್ಮನ್ನು ನಾವು ಪರೀಕ್ಷಿಸಿಕೊಳ್ಳಬೇಕು. "ಆಗ ನಾನು ಆತನ ದೇಹಕ್ಕೂ ರಕ್ತಕ್ಕೂ, ಯೋಗ್ಯನಾಗಿರುವೆನೋ?" ಎಂಬ ಪ್ರಶ್ನೆಯು ಉದ್ಭವಿಸುತ್ತದೆ.

ಈ ಕಾರಣದಿಂದ, ಕರ್ತನ ಭೋಜನದ ಸಮಯದಲ್ಲಿ ಕೆಲವು ಕ್ರೈಸ್ತರು ಕರ್ತನ ಮರಣದ ಕುರಿತಾದ ವಾಕ್ಯಭಾಗವನ್ನು ಓದುವರು, ಆ ವಾಕ್ಯದಿಂದ ಕರ್ತನ ಮರಣವನ್ನು ನೆನಪು ಮಾಡಲಾಗುತ್ತದೆ. ಇತರೆ ಕ್ರೈಸ್ತರು ಯೇಸುವಿನ ಮರಣದ ಕುರಿತು ತಂದೆಯಲ್ಲಿ ಪ್ರಾರ್ಥಿಸುತ್ತಾರೆ, ಅವರು ಆತನ ಮಗನ ದೇಹ ಹಾಗೂ ರಕ್ತದ ಯಜ್ಞಕ್ಕಾಗಿ ಕೃತಜ್ಞತೆ ಹೇಳುವರು. ಇನ್ನು ಕೆಲವರು ಇದನ್ನು ಮಾಡುವಾಗ ಆತನ ದೈಹೀಕವಾದ ಯಾತನೆಯನ್ನು ಹೆಚ್ಚಾಗಿ ನೆನಪಿಸುವರು.

ನಂತರದಲ್ಲಿ ತೀರ್ಪಿಗೆ ಒಳಗಾಗುವದಕ್ಕಿಂತಲೂ, ನಾವೇ ನಮಗೆ ತೀರ್ಪು ಮಾಡಿಕೊಳ್ಳುವದು ಲೇಸು ಎಂದು ಪೌಲನು ತಿಳಿಸಿರುವನು. ಅದರ ಕುರಿತಾಗಿ ಪೌಲನು ಬರೆದು,

> ನಮ್ಮನ್ನು ನಾವೇ ವಿಚಾರಿಸಿಕೊಂಡರೆ ನ್ಯಾಯವಿಚಾರಣೆಗೊಳಗಾಗುವದಿಲ್ಲ. ಆದರೆ ನಾವು ಕರ್ತನ ನ್ಯಾಯವಿಚಾರಣೆಗೆ ಒಳಗಾಗಿರಲಾಗಿ ಆತನು - ಇವರಿಗೆ ಲೋಕದವರ ಸಂಗಡ ಅಪರಾಧಿಗಳೆಂಬ ನಿರ್ಣಯವಾಗಬಾರದೆಂದು ನಮ್ಮನ್ನು ಶಿಕ್ಷಿಸುತ್ತಾನೆ (1 ಕೊರಿಂಥ 11:31, 32).

ಪರೀಕ್ಷೆ ಮಾಡಿಕೊಳ್ಳುವದರಿಂದ ವೃದ್ಧಿಯಾಗುವ ಸಾಧ್ಯತೆಗಳಿವೆ. ಸರಿಯಾದ ಎಚ್ಚರಿಕೆಯ ಮಾತುಗಳು ನಮ್ಮನ್ನು ತಿದ್ದುತ್ತವೆ. ಕರ್ತನ ವಾಕ್ಯದ ಮುಖಾಂತರ, ದೇವರ ಶಿಸ್ತಿಗೆ ಒಳಪಡುತ್ತೇವೆ. ನಾವು ಓದುತ್ತೇವೆ, ಕಲಿಯುತ್ತೇವೆ, ಮಾನಸಾಂತರಪಡುತ್ತೇವೆ ಹಾಗೂ ಬದಲಾಗುತ್ತೇವೆ. ಇವುಗಳನ್ನು ಮಾಡುವದರಿಂದ, ನಾವುಗಳು ಅಂತಿಮವಾದ ತೀರ್ಪಿಗೆ ಭಯಪಡುವ ಅಗತ್ಯವಿಲ್ಲ.

## ಈ ಅನಾಹುತದಿಂದಾಗುವ ಪರಿಣಾಮ

ಕರ್ತನ ಭೋಜನವನ್ನು ತೆಗೆದುಕೊಳ್ಳುವ ಜವಾಬ್ದಾರಿಯಿಂದ ಮುಂದಕ್ಕೆ ಸಾಗಿ ಅದರಲ್ಲಿರುವ ಮಹತ್ವವನ್ನು ತಿಳಿಸಿದ ನಂತರ, ಅದನ್ನು ನಿಂದಿಸುವದರಿಂದ ಉಂಟಾಗುವ ಪರಿಣಾಮದ ಕುರಿತು ಪೌಲನು ತಿಳಿಸಿರುವನು. "ಈ ಕಾರಣದಿಂದಲೇ ನಿಮ್ಮಲ್ಲಿ ಬಹು ಮಂದಿ ಬಲಹೀನರೂ ರೋಗಿಗಳೂ ಆಗಿದ್ದಾರೆ ಮತ್ತು ಅನೇಕರು ಸಾಯುವರು" (1 ಕೊರಿಂಥ 11:30). ಯೇಸುವಿನ ಮರಣವು ಕ್ರೈಸ್ತರ ಜೀವಿತದ ಮುಖ್ಯ ಕೇಂದ್ರ ಬಿಂದುವಾಗಿದೆ. ಆತನ ಮರಣದಿಂದ ನಮಗೆ ಬಿಡುಗಡೆಯಾಯಿತು, ಶುದ್ಧಪಡಿಸುವ ಆತನ ರಕ್ತದಿಂದ ನಾವು ಜೀವಿಸುತ್ತೇವೆ; ಆತನ ಯಜ್ಞದಲ್ಲಿ ನಮ್ಮ ಒಂದು ಭಾಗವಾಗಿದೆ. ಒಬ್ಬನು ಕರ್ತನ ಮೇಜಿನಲ್ಲಿ, ಆತನ ಸಹೋದರ ಹಾಗೂ ಸಹೋದರಿಯರ ಸಂಗಡ ಗೌರವಯುತವಾದ ನೆನಪು ಮಾಡದೆ ಹೋದರೆ, ಅವನಲ್ಲಿ ಬಲಹೀನತೆಯ ಅನಾಹುತ ಅನಾರೋಗ್ಯ ಮತ್ತು ಆತ್ಮದ ಅವಿಶ್ರಾಂತಿ ಉಂಟಾಗುತ್ತದೆ. ಅದರ ಕುರಿತು ಪೌಲನು, "ಈ ಕಾರಣದಂದ" ಎಂಬ ವ್ಯಾಖ್ಯಾನವನ್ನು ಬಳಸಿರುವನು. ಕರ್ತನ ಭೋಜನದಲ್ಲಿ ಅಕ್ರಮವಾಗಿ ಪಾಲು ತೆಗೆದುಕೊಳ್ಳುವವನು, ದೇವರ ಚಿತ್ತವನ್ನು ಗ್ರಹಿಸಲಾರನು, ಹಾಗೂ ದೇವರಿಗೆ ಸಮರ್ಪಿತವಾದ ಜೀವಿತವನ್ನು ಮುಂದುವರೆಸಲಾರನು ಮತ್ತು ಕರ್ತನ ಪ್ರೀತಿಯಲ್ಲಿ ವೃದ್ಧಿಯಾಗಲಾರನು.

ಕೊರಿಂಥದವರು ಈ ವಿಚಾರದಲ್ಲಿ ಅಕ್ರಮವೆಸಗಿದರು, ಅದು ಅವರ ಹಿಡಿತವನ್ನು ತಪ್ಪಿಹೋಯಿತು. ಅವರು ಅದನ್ನು ಮಾಡಿದರೂ, ಯೋಗ್ಯವಾದ ರೀತಿಯಲ್ಲಿ ಮಾಡಲಿಲ್ಲ. ಆದ್ದರಿಂದ ಪೌಲನು, "ನೀವುಗಳು ಕರ್ತನ ಭೋಜನಕ್ಕೆ ಸೇರಿ ಬಂದಾಗ್ಯೂ ಅದರಲ್ಲಿ ಯೋಗ್ಯನಾಗಿ ಪಾಲು ತೆಗೆದುಕೊಳ್ಳಲಿಲ್ಲ. ನೀವು ಅದರ ಮುಂದೆ ನಿಮ್ಮ ಧೈಹೀಕ ಆಹಾರವನ್ನು ಮುಂದಿಟ್ಟಿರುವಿರಿ. ನೀವು ಕರ್ತನ ಭೋಜನದ ಮಹತ್ವವನ್ನು ಆಚರಿಸದೆ, ನಿಮ್ಮ ಸ್ವಂತ ಆಹಾರದ ಬಗ್ಗೆ ಚಿಂತನೆ ಮಾಡಿರುವಿರಿ" ಅಂದನು.

## ಮುಕ್ತಾಯ

ಪೌಲನ ಈ ಸಂದೇಶದಿಂದ ನಾವುಗಳು ಏನನ್ನು ಕಲಿತ ಹಾಗಾಯಿತು? ಕರ್ತನ ಭೋಜನದಲ್ಲಿ ಅಕ್ರಮವಾಗಿ ಪಾಲು ತೆಗೆದುಕೊಳ್ಳುವಲ್ಲಿ ಇರುವ ಸತ್ಯತೆಯನ್ನು ನಾವುಗಳು ಅರಿಯಬೇಕು. ಅದರಲ್ಲಿ ಪಾಲು ತೆಗೆಯುವಾಗ, ನಮ್ಮನ್ನು ನಾವು ಪರೀಕ್ಷಿಸಿಕೊಳ್ಳಬೇಕು. ನಾನು ಕರ್ತನ ದೇಹ ಹಾಗೂ ರಕ್ತವನ್ನು ನೆನಪು ಮಾಡುತ್ತಿರುವೆನೋ? ಎಂಬ ಪ್ರಶ್ನೆಯನ್ನು ಕೇಳಿಕೊಳ್ಳಬೇಕು. ನಾವು ಪ್ರತಿಭಾನುವಾರ ಈಸಂಗತಿಗೆ ಎಚ್ಚರವಾಗಿಲ್ಲದಿದ್ದರೆ, ಅದರ ಪರಿಣಾಮವನ್ನು ಎದುರಿಸಬೇಕು. ಕರ್ತನ ಭೋಜನವಿಲ್ಲದಿದ್ದರೆ, ಕರ್ತನ ದಿನವಿರಲಾರದು, ಗೌರವದಿಂದ ಅದರಲ್ಲಿ ಪಾಲು ತೆಗೆಯಬೇಕು, ಅದರಲ್ಲಿ ಮನಸ್ಸನ್ನು ಕೇಂದ್ರಿಕರಿಸಿ, ನೆನಪು ಮಾಡಬೇಕು.

---

*"ಒಬ್ಬನು ಹಸಿದರೆ ಅವನು ಮನೆಯಲ್ಲೇ ಊಟಮಾಡಲಿ; ನೀವು ಕೂಡಿ ಬಂದದ್ದು ನ್ಯಾಯತೀರ್ಪಿಗೊಳಗಾಗುವದಕ್ಕೆ ಕಾರಣವಾಗಬಾರದು. ಮಿಕ್ಕಾದ ಸಂಗತಿಗಳನ್ನು ನಾನು ಬಂದಾಗ ಕ್ರಮಪಡಿಸುತ್ತೇನೆ" (1 ಕೊರಿಂಥ 11:34ಎ).*